**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 11/2019**

ಸಿಡಬ್ಲ್ಯು 12 ಪಿಡಬ್ಲ್ಯು- 4

ದಿನಾಂಕಃ 17.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಡಾ. ವಿ ವಿ ಶಿಂಧೆ

ವಯಸ್ಸು : 58 ವರ್ಷ

ಉದ್ಯೋಗ : ಜಿಲ್ಲಾ ಶಸ್ತ್ರಚಿಕಿತ್ಸಕರು , ಬೀಮ್ಸ

ವಾಸ ಸ್ಥಳ : ಬೆಳಗಾವಿ

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾನು ಚಿಕ್ಕೋಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಮೇ 2008 ರಿಂದ ಸಪ್ಟೆಂಬರ್ 2015 ರವರೆಗೆ ಎಂದು ಸೇವೆಸಲ್ಲಿಸಿದ್ದೇನೆ. 31.12.2014 ರಂದು ಹಲ್ಲೆಯಲ್ಲಿ ಗಾಯಗೊಂಡಿರುವುದಾಗಿ ಹೇಳಿ ಚಾಸಾ 5- ವಿನಾಯಕ ಅವರು ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಈಕೆಳಗಿನ ಗಾಯ ಕಂಡು ಬಂದವು.

1) 1 X ½ ಸೆಂ.ಮೀ ಅಳತೆಯ ಬಲಗೈ ಮಧ್ಯದ ಮತ್ತು ಉಂಗುರು ಬೆಳರಳಿಗೆ ತರಚಿದ ಗಾಯ ಆಗಿದ್ದು ಕೆಂಪು ಬಣ್ಣದಿಂದ ಕೂಡಿತ್ತು.

2) 4 X 2 ಸೆಂ.ಮೀ ಅಳತೆಯ ತರಚಿದ ಗಾಯ ಬಲಮೊಣಕಾಲಿನ ಕೆಳಗೆ ಇದ್ದು ಕೆಂಪು ಬಣ್ಣದಿಂದ ಕೂಡಿತ್ತು.

3) ಬಲಮೀನುಖಂಡದಲ್ಲಿ ಒತ್ತಿದಾಗ ನೋವು ಇದ್ದಿದ್ದು ಕಂಡು ಬಂತು.

4) 4 X 2 ಸೆಂ.ಮೀ ಅಳತೆಯ ಹೆಪ್ಪುಗಟ್ಟಿದ ಗಾಯ ಬೆನ್ನಿನ ಬಲಭಾಗದ ಕೆಳಗೆ ಇದ್ದು ಅದು ಕೆಂಪು ಬಣ್ಣದಿಂದ ಕುಡಿತ್ತು.

5) 1 X 1 ಸೆಂ.ಮೀ ಅಳತೆಯ ತರಚಿದ ಗಾಯ ಎಡಗಣ್ಣಿನ ಹೊರಭಾಗದಲ್ಲಿದ್ದು ಕಪ್ಪುಬಣ್ಣದಿಂದ ಕೂಡಿತ್ತು.

6) 1 X 1 ಸೆಂ.ಮೀ ಅಳತೆಯ ತರಚಿದ ಗಾಯ ಎಡಗೈ ಕಿರುಕುರಳಿಗೆ ಇದ್ದು ಕೆಂಪು ಬಣ್ಣದಿಂದ ಕೂಡಿತ್ತು. ಆ ಗಾಯಾಳುವನ್ನು ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವದೇ ಮೂಳೆ ಮುರಿದಿದ್ದು ಕಂಡುಬಂದಿಲ್ಲ. ನಾನು ಹೇಳಿದ ಎಲ್ಲ ಗಾಯ ಸಾದಾಸ್ವರೂಪದ್ದು ಮತ್ತು ಬಿರುಸಾದ ಹಾಗೂ ಮೊಂಡಾದ ವಸ್ತುವಿನಿಂದ 6 ಗಂಟೆಗಳ ಒಳಗಾಗಿ ಆದದ್ದು ಕಂಡು ಬಂತು. ಈ ಬಗ್ಗೆ ಗಾಯ ಪ್ರಮಾಣಪತ್ರ ನೀಡಿದ್ದೆನೆ. ಇದನ್ನು ನಿಪಿ 2 ಎಂದು, ಸಾಕ್ಷಿ ಸಹಿ ನಿಪಿ 2(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 4 - ಮಲ್ಲಿಕಾರ್ಜುನ ಇವರು ಅದೇ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಈ ಕೆಳಗಿನ ಗಾಯ ಕಂಡು ಬಂದವು.

1) 5 X 4 ಸೆಂ.ಮೀ ಅಳತೆಯ ಹೆಪ್ಪುಗಟ್ಟಿದಗಾಯ ತಲೆ ಹಿಂದೆ ಕೆಂಪು ಬಣ್ಣದಿಂದ

ಕೂಡಿತ್ತು.

2) 3 X 2 ಸೆಂ.ಮೀ ಅಳತೆಯ ರಕ್ತಹೆಪ್ಪುಗಟ್ಟಿದ ಗಾಯ ಹಣೆಯ ಮಧ್ಯದಲ್ಲಿ ಇದ್ದು ಕೆಂಪು ಬಣ್ಣದಿಂದ ಕೂಡಿತ್ತು.

3) ಬಲಭುಜದ ಮೇಲೆ ಕೈಯಿಂದ ಒತ್ತಿದಾಗ ನೋವು ಇದೆ ಎಂದು ಹೇಳಿದ

4) 3 X 4 ಸಂ.ಮೀ ಅಳತೆಯ ರಕ್ತ ಹೆಪ್ಪುಗಟ್ಟಿದ ಗಾಯ ಬಲ ಮುಂತೋಳಿನಲ್ಲಿ ಕೆಂಪುಬಣ್ಣದಿಂದ ಕೂಡಿತ್ತು.

ಆ ಗಾಯಾಳುವನ್ನು ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವದೇ ಮೂಳೆ ಮುರಿದಿದ್ದು ಕಂಡುಬಂದಿಲ್ಲ.

5) 3 x 2 ಅಳತೆಯ ಎಡಮೊಣಕಾಲಿನ ಮೇಲೆ ಕೆಂಪ್ಪು ಬಣ್ಣದಿಂದ ಕೂಡಿತ್ತು.

6) ಬೆನ್ನಿನ ಮಧ್ಯಭಾಗದಲ್ಲಿ ಕೈಯಿಂದ ಒತ್ತಿದಾಗ ನೋವು ಇದೆ ಎಂದು ಹೇಳಿದ

ನಾನು ಹೇಳಿದ ಎಲ್ಲ ಗಾಯ ಸಾದಾಸ್ವರೂಪದ್ದು ಮತ್ತು ಬಿರುಸಾದ ಹಾಗೂ ಮೊಂಡಾದ ವಸ್ತುವಿನಿಂದ 6 ಗಂಟೆಗಳ ಒಳಗಾಗಿ ಆದದ್ದು ಕಂಡು ಬಂತು. ಈ ಬಗ್ಗೆ ಗಾಯ ಪ್ರಮಾಣಪತ್ರ ನೀಡಿದ್ದೇನೆ. ಇದನ್ನು ನಿಪಿ 3 ಎಂದು, ಸಾಕ್ಷಿ ಸಹಿ ನಿಪಿ 3(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 1 - ಮಲ್ಲಪ್ಪಾ ಮಾರುತಿ ಕೋಷ್ಟಿ ಇವರು ಅದೇ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಈ ಕೆಳಗಿನ ಗಾಯ ಕಂಡು ಬಂದವು.

1) 5 X 5 ಸೆಂ.ಮೀ ಅಳತೆಯ ಹೆಪ್ಪುಗಟ್ಟಿಧ ಗಾಯ ಬಲಮೊಣಕಾಲಿನ ಮೇಲ.ಬಾಗದಲ್ಲಿ ಕೆಂಪು ಬಣ್ಣದಿಂದ ಕೂಡಿತ್ತು.

2) 4 X 4 ಸೆಂ.ಮೀ ಅಳತೆಯ ರಕ್ತಹೆಪ್ಪುಗಟ್ಟಿಧ ಗಾಯ ಹಣೆಯ ಬಲಭಾಗದಲ್ಲಿ ಇದ್ದು ಕೆಂಪು ಬಣ್ಣದಿಂದ ಕೂಡಿತ್ತು.

3) 4 X 3 ಸೆಂ.ಮೀ ಅಳತೆಯ ರಕ್ತಹೆಪ್ಪುಗಟ್ಟಿಧ ಗಾಯ ಎಡಮುಂದೋಳಿನ ಹೊರಭಾಗದಲ್ಲಿ ಕೆಂಪ್ಪುಬಣ್ಣದಿಂದ ಕೂಡಿತ್ತು.

ನಾನು ಹೇಳಿದ ಎಲ್ಲ ಗಾಯ ಸಾದಾಸ್ವರೂಪದ್ದು ಮತ್ತು ಬಿರುಸಾದ ಹಾಗೂ ಮೊಂಡಾದ ವಸ್ತುವಿನಿಂದ 6 ಗಂಟೆಗಳ ಒಳಗಾಗಿ ಆದದ್ದು ಕಂಡು ಬಂತು. ಈ ಬಗ್ಗೆ ಗಾಯ ಪ್ರಮಾಣಪತ್ರ ನೀಡಿದ್ದೇನೆ. ಇದನ್ನು ನಿಪಿ 4 ಎಂದು, ಸಾಕ್ಷಿ ಸಹಿ ನಿಪಿ 4(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 6 - ಈರಪ್ಪಾ ಕೋಷ್ಟಿ ಇವರು ಅದೇ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಈ ಕೆಳಗಿನ ಗಾಯ ಕಂಡು

ಬಂದವು.

1) ಬಲಮುಂಗೈದಲ್ಲಿ ಒತ್ತಿದಾಗ ನೋವು ಇತ್ತು. ಕ್ಷಕಿರಣ ಮಾಡಿಸಿದಾಗ ಯಾವದೇ ಮೂಳೆ ಮುರಿತ ಕಂಡುಬಂದಿಲ್ಲ.

2) 10 X 3 ಸೆಂ.ಮೀ ಅಳತೆಯ ಹೆಪ್ಪುಗಟ್ಟಿದ ಗಾಯ ಎಡ ತೊಡೆಯ ಮೇಲ್ಭಾಗದಲ್ಲಿ ಕೆಂಪು ಬಣ್ಣದಿಂದ ಕೂಡಿತ್ತು.

3) ಎಡತೊಡೆ ಮೇಲಭಾಗದಲ್ಲಿ ಒತ್ತಿದಾಗ ನೋವು ಇತ್ತು.

4) ಬೆನ್ನಿನ ಮೇಲಭಾಗದಲ್ಲಿ ಒತ್ತಿದಾಗ ನೋವು ಇತ್ತು

ನಾನು ಹೇಳಿದ ಎಲ್ಲ ಗಾಯ ಸಾದಾಸ್ವರೂಪದ್ದು ಮತ್ತು ಬಿರುಸಾದ ಹಾಗೂ ಮೊಂಡಾದ ವಸ್ತುವಿನಿಂದ 6 ಗಂಟೆಗಳ ಒಳಗಾಗಿ ಆದದ್ದು ಕಂಡು ಬಂತು. ಈ ಬಗ್ಗೆ ಗಾಯ ಪ್ರಮಾಣಪತ್ರ ನೀಡಿದ್ದೇನೆ. ಇದನ್ನು ನಿಪಿ 5 ಎಂದು, ಸಾಕ್ಷಿ ಸಹಿ ನಿಪಿ 5(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 7 - ಮಹಾದೇವಿ ಈರಪ್ಪಾ ಕೋಷ್ಟಿ ಇವರು ಅದೇ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಈ ಕೆಳಗಿನ ಗಾಯ ಕಂಡು ಬಂದವು.

1) 3 X 3 ಸೆಂ.ಮೀ ಅಳತೆಯ ಹೆಪ್ಪುಗಟ್ಟಿದ ಗಾಯ ಎಡಮುಂತೋಳಿನಲ್ಲಿ ಕೆಂಪು ಬಣ್ಣದಿಂದ ಕೂಡಿತ್ತು.

2) 3 X 3 ಸೆಂ.ಮೀ ಅಳತೆಯ ರಕ್ತಹೆಪ್ಪುಗಟ್ಟಿದ ಗಾಯ ಎಡತೊಡೆಯ ಹೊರಭಾಗಲ್ಲಿ ಕೆಂಪುಬಣ್ಣದಿಂದ ಕೂಡಿತ್ತು.

ನಾನು ಹೇಳಿದ ಎಲ್ಲ ಗಾಯ ಸಾದಾಸ್ವರೂಪದ್ದು ಮತ್ತು ಬಿರುಸಾದ ಹಾಗೂ ಮೊಂಡಾದ ವಸ್ತುವಿನಿಂದ 6 ಗಂಟೆಗಳ ಒಳಗಾಗಿ ಆದದ್ದು ಕಂಡು ಬಂತು. ಈ ಬಗ್ಗೆ ಗಾಯ ಪ್ರಮಾಣಪತ್ರ ನೀಡಿದ್ದೇನೆ. ಇದನ್ನು ನಿಪಿ 6 ಎಂದು, ಸಾಕ್ಷಿ ಸಹಿ ನಿಪಿ 6(ಎ) ಎಂದು ಗುರುತಿಸಲಾಯಿತು.

ನಿಪಿ 2 ರಿಂದ 6 ರಲ್ಲಿ ಹೇಳಿರುವಂತಹ ಗಾಯಗಳು ಈಗ ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 5 ರಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ-** ಆರೋಪಿ ಪರ ಶ್ರೀ ಎಸ ಎಸ ಡಿ ವಕೀಲರಿಂದಃ

ಪೋಲಿಸರು ಗಾಯಾಳುಗಳ ಜೊತೆ ಯಾದಿ ತಂದಿರಲಿಲ್ಲ. ಸದರಿ ಗಾಯಾಳುಗಳು ನನ್ನ ಮುಂದೆ ಕಲ್ಲು ಮತ್ತು ಬಡಿಗೆಗಳಿಂದ ಹೊಡೆದಿದ್ದಾರೆಂದು ಹೇಳಿಲ್ಲ ಅನ್ನುವುದು ಸರಿಯಲ್ಲ. ಸಾಕ್ಷಿ ಈ ರೀತಿ ನಿಪಿ 3 ರಿಂದ 7 ರಲ್ಲಿ ನಮೂದಿಸಿಲ್ಲ ಎಂದು ಸ್ವತಃ ಹೇಳುತ್ತಾರೆ. ಹಲ್ಲೆಯಬಗ್ಗೆ ಹಿನ್ನೆಲೆ ಹೇಳದೇ ಇದ್ದರಿಂದ ನಾನು ನಮೂದಿಸಿಲ್ಲ ಅನ್ನುವುದು ಸರಿಯಲ್ಲ. ಮು.ಮಾ.1 ರಿಂದ 5 ನ್ನು ಪೋಲಿಸರು ಪರೀಕ್ಷೆಗೆ ಕಳುಹಿಸಿಲ್ಲ ಅನ್ನುವದು ನಿಜ. ಯಾರಾದರೂ ಮೇಲಿಂದ

ಬಿರುಸಾದ ಮತ್ತು ಮೊಂಡಾದ ವಸ್ತುವಿನ ಮೇಲೆಬಿದ್ದರೆ ನಾನು ಹೇಳಿರುವಂತಹ ಗಾಯ ಆಗುವ ಸಾಧ್ಯತೆ ಇರುತ್ತದೆ ಅನ್ನುವದಕ್ಕೆ ಸಾಕ್ಷಿ ಚಾಸಾ 4 ಮತ್ತು 5 ರಿಗೆ ಆಗುವದಿಲ್ಲ, ಬೇರೆ ಗಾಯಾಳುಗಳಿಗೆ ಆಗಬಹುದು ಎಂದು ಹೇಳುತ್ತಾರೆ. ಈಗ ನೋಡಿದ ಮು.1 ರಿಂದ 4 ರೌಂಡ ಸೇಫ ಇವೆ ಅನ್ನುವದು ನಿಜ. ಅದರಿಂದ ಹೊಡೆದರೆ ರೌಂಡಶೇಫ ಗಾಯ ಆಗುತ್ತದೆ ಅನ್ನುವುದು ನಿಜ. ರಕ್ತಹೆಪ್ಪುಗಟ್ಟಿದ ಗಾಯಗಳು ಬಡಿಗೆಯಿಂದ ಆಗಿರುತ್ತದೆ. ಒತ್ತಿದಾಗ ನೋವುತರಹದ ಗಾಯಗಳು ಕಲ್ಲಿನಿಂದ ಹೊಡೆದರೆ ಆಗುತ್ತದೆ. ಅದೇ ದಿನ ಈ ಪ್ರಕರಣದ 6 ಮತ್ತು 7 ನೇ ಆರೋಪಿತರನ್ನು ಪರೀಕ್ಷೆ ಮಾಡಿದ್ದೇನೆ ಅನ್ನುವದು ನಿಜ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಪ್ರಮಾಣಪತ್ರ ನೀಡಿದ್ದೇನೆ ಅನ್ನುವುದು ಸರಿಯಲ್ಲ. ನಾನು ಪೋಲಿಸರಿಗೆ ಎಮ ಎಲ ಸಿ ವರದಿ ಮಾಡಿಲ್ಲ. ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕಳುಹಿಸಿಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.